ಸಂಖ್ಯೆ:ಕೆಎಸ್‌ಎಟಿ/ಇಎಸ್‌ಟಿ(1)/ಆರ್‌ಸಿಟಿ–ಎಸ್‌ಟಿಎನ್/65/2020

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
6ನೇ ಮತ್ತು 7ನೇ ಮಹಡಿ, ಕಂದಾಯ ಭವನ,
ಕೆ.ಜಿ.ರಸ್ತೆ, ಬೆಂಗಳೂರು–560 009,
ದಿನಾಂಕ 24–06–2021.

**ಸೂಚನಾ ಪತ್ರ**

ವಿಷಯ: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿಯಿರುವ ಶೀಘ್ರಲಿಪಿಗಾರರ ಹುದ್ದೆಗಳ ನೇಮಕಾತಿ ಕುರಿತು – ಅಭ್ಯರ್ಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗೆ ಹಾಜರಾಗುವ ಬಗ್ಗೆ.

ಉಲ್ಲೇಖ: ಈ ಕಛೇರಿ ಅಧಿಸೂಚನೆ ಸಂಖ್ಯೆ ಕೆಎಸ್‌ಎಟಿ/ಇಎಸ್‌ಟಿ(1)/ಆರ್‌ಸಿಟಿ–ಎಸ್‌ಟಿಎನ್/65/2020, ದಿನಾಂಕ: 21–01–2021.

* * *

ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಲ್ಲಿ ಖಾಲಿ ಇರುವ ಉಳಿಕೆ ಮೂಲವೃಂದ ಮತ್ತು ಸ್ಥಳೀಯ ವೃಂದದ ಶೀಘ್ರಲಿಪಿಗಾರ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಉಲ್ಲೇಖಿತದ ಪ್ರಕಟಣೆ ಮೇರೆಗೆ ಈ ಕಛೇರಿಯ 7ನೇ ಮಹಡಿಯಲ್ಲಿ ಸಂಬಂಧಪಟ್ಟ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ **08–07–2021** ರಂದು ಪೂರ್ವಾಹ್ನ **10–30** ಗಂಟೆಗೆ ನಡೆಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ಸೂಚನಾ ಪತ್ರದೊಂದಿಗೆ ಅನುಬಂಧಿಸಲಾದ, ಅನುಬಂಧ–1ರಲ್ಲಿನ 152 ಉಳಿದ ಮೂಲ ವೃಂದದ ಅಭ್ಯರ್ಥಿಗಳು ಮತ್ತು ಅನುಬಂಧ–2 ರಲ್ಲಿನ 16 ಸ್ಥಳೀಯ ವೃಂದದ (ಹೈದರಾಬಾದ್–ಕರ್ನಾಟಕ ಪ್ರದೇಶದ) ಅಭ್ಯರ್ಥಿಗಳನ್ನು **ದಿನಾಂಕ 08–07–2021 ರಂದು 10–30 ಗಂಟೆಗೆ** ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗಾಗಿ ಹಾಜರಿರುವಂತೆ ಸೂಚಿಸಿ, ಸೂಚನಾ ಪತ್ರಗಳನ್ನು ಈಗಾಗಲೇ ತ್ವರಿತ ಅಂಚೆ ಮೂಲಕ ರವಾನಿಸಲಾಗಿದೆ. ಆದಾಗ್ಯೂ, ಇದರೊಂದಿಗೆ ಅನುಬಂಧಿಸಲಾದ ಪಟ್ಟಿಗಳಲ್ಲಿನ ಅರ್ಹ ಅಭ್ಯರ್ಥಿಗಳು ಅರ್ಜಿಯೊಂದಿಗೆ ಸಲ್ಲಿಸಲಾದ ಎಲ್ಲಾ ಮೂಲ ದಾಖಲೆಗಳ ಪರಿಶೀಲನೆಗೆ ಮೇಲ್ಕಂಡ ದಿನಾಂಕದಂದು ಹಾಜರಾಗುವಂತೆ ಈ ಮೂಲಕವೂ ಸಹ ತಿಳಿಯಪಡಿಸಿದೆ.

ಸಹಿ/–
ವಿಲೇಖನಾಧಿಕಾರಿ,
ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ,
ಬೆಂಗಳೂರು–09.